**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಮಧುಗಿರಿ**

**ಸಿ.ಸಿ ಸಂಖ್ಯೆ: 1473/2020**

| | | |
|---|---|---|
| ಸಾಕ್ಷಿದಾರರ ಹೆಸರು | ನರಸಿಂಹಮೂರ್ತಿ | ಪ್ರಮಾಣ ಮಾಡಿದ ದಿನಾಂಕಃ 10.07.2025 |
| ತಂದೆ ಹೆಸರು | ನರಸಿಂಹಯ್ಯ | |
| ವಯಸ್ಸು | 53 ವರ್ಷ | |
| ವೃತ್ತಿ | ಕ.ರಾ.ರ.ಸಾ ನಿಯಂತ್ರಕ ಪೇದೆ, ಮಧುಗಿರಿ | ಚಾಸಾ: 2 |
| ವಾಸಸ್ಥಳ | ಮಧುಗಿರಿ ಟೌನ್ | ಪ್ರಾಸಾ: 2 |

**ದಿನಾಂಕಃ** 10.07.2025 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ನಾನು 2018 ರಿಂದ ಈವರೆಗೆ ಮಧುಗಿರಿ ಕೆ ಎಸ್ ಆರ್ ಟಿ ಸಿ ನಿಯಂತ್ರಕನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ

ದಿಃ 28-06-2020 ರಂದು ಸಮಯ ಸುಮಾರು 3 ಗಂಟೆಗೆ ಬಸ್ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಗೀತ ಎನ್ನುವವರ ಜೊತೆ ಯಾರೋ ಒಬ್ಬರು ಗಲಾಟೆಯಾಗಿ ಮಾಡುತ್ತಿದ್ದರು. ನಾನು ಹೋಗಿ ನೋಡಿದಾಗ ಜಗಳವಾಗುತ್ತಿದ್ದು, ನಂತರ ಪೋಲಿಸ್ ಠಾಣೆಗೆ ಕರೆ ಮಾಡಿ ತಿಳಿಸಿರುತ್ತೇನೆ. ನಾನು ಪೋಲೀಸರಿಗೆ ಆರೋಪಿಯು ಕುಡಿದು ಗಲಾಟೆ ಮಾಡುತ್ತಿದ್ದ ಎಂದು

ತಿಳಿಸಿರುತ್ತೇನೆ. ಪೋಲಿಸರು ಬಂದು ಆರೋಪಿ ಮತ್ತು ಗೀತಾ ರವರನ್ನು ಕರೆದುಕೊಂಡು ಹೋಗಿರುತ್ತಾರೆ. ಆರೋಪಿಯ ಹೆಸರು ಶಿವಕುಮಾರ್. ಸಾಕ್ಷಿಯು ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿ ರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿಯವರಿಂದಃ**

ಆರೋಪಿಯು ಗೀತಾ ರವರ ಬುಜ ಮುಟ್ಟಿದರು ಅವರ ಹೆಸರನ್ನು ಕೇಳಿದರು ಎಂದರೆ ನನಗೆ ಗೊತ್ತಿಲ್ಲ. ಆಗ ಗೀತಾ ರವರು ದೂರ ನಿಂತುಕೋ ಮೈ ಮುಟ್ಟಬೇಡ, ನಾನು ನಿನ್ನನ್ನು ಏನು ಕೇಳಲಿಲ್ಲ, ಮೈ ಮುಟ್ಟಿದರೆ ಏನಾಗುತ್ತದೆ ಎಂದರೆ ನನಗೆ ಬೈಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ನಾನು ಬಟ್ಟೆ ಬಿಚ್ಚಿ ತೋರಿಸಲಿಲ್ಲ ಮತ್ತು ಬೋಳಿಮುಂಡೆ, ಸೂಳೆಮುಂಡೆ ಎಂದು ಬೈಯ್ಯುತ್ತಿದ್ದ ಹಾಗೂ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾನೆ ಎಂದರೆ ಸರಿ. ಆಗ ನಾನು ಮತ್ತು ಚಾಸಾ-3 ಮತ್ತು 4 ರವರು ಬೈದು ಬುದ್ದಿ ಹೇಳಿದಾಗ ಆರೋಪಿ ಅಲ್ಲಿಂದ ಹೋಗಿರುವುದಿಲ್ಲ ಎಂದರೆ ಸರಿ. ಸಾರ್ವಜನಿಕರು ಆರೋಪಿಯ ವರ್ತನೆಯನ್ನು ಸಹಿಸಿಕೊಳ್ಳದೇ ಎಲ್ಲರೂ ಹೊಡೆಯುತ್ತಿದ್ದರು ಎಂದರೆ ಸರಿ. ಆರೋಪಿಯ ಹೆಸರು ಸೋಮಶೇಖರ್, ದೊಡ್ಡಮಾಲೂರು ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ವಿವರವಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಕೆ ವಿ ಕೆ ರವರಿಂದಃ**

ನಾನು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಲ್ಲಿ ನಿಯಂತ್ರಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನಾನು ನನ್ನ ಕಛೇರಿಯಲ್ಲಿ ಕುಳಿತು ಕೆಲಸ ಮಾಡುತ್ತಿರುತ್ತೇನೇ ಎಂದರೆ ಸರಿ. ಘಟನಾ ಸ್ಥಳ ನನ್ನ ಕಛೇರಿಗೆ 150 ಮೀ

ಅಂತರವಿದೆ ಎಂದರೆ ಸರಿಯಲ್ಲ . ಸುಮಾರು 50 ರಿಂದ 70 ಮೀ ಅಂತರವಿದೆ ಎಂದು ಉತ್ತರಿಸುತ್ತಾರೆ. ಘಟನಾ ಸ್ಥಳಕ್ಕೂ ನನ್ನ ಕಛೇರಿಗೂ 200 ಮೀ ಅಂತರವಿರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಎಲ್ಲಾ ಬಸ್ ಗಳು ಪ್ರವೇಶ ಮಾಡುತ್ತವೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಬರುವ ಬಸ್ ಗಳು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಬಸ್ ಗಳು ಪ್ರವೇಶ ಮಾಡುವುದರಿಂದ ಅಲ್ಲಿ ಓಡಾಡುವ ಜನರು ನನಗೆ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಅದೇ ಪ್ರವೇಶ ದ್ವಾರದಲ್ಲಿ ಜನರು ಪ್ರವೇಶ ಮಾಡುತ್ತಾರೆ ಎಂದರೆ ಸರಿ. ಯಾವ ವಾರದಂದು ಘಟನೆಯಾಯಿತು ಎಂದು ನನಗೆ ಗೊತ್ತಿಲ್ಲ. ಗಲಾಟೆಯ ಶಬ್ದ ನನಗೆ ಕೇಳಿಸಿರುತ್ತದೆ. ನಾನು ಗಲಾಟೆ ನಡೆಯುವಾಗಲೇ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಆರೋಪಿ ಗೀತಾ ರವರನ್ನು ಬೈಯ್ಯುತ್ತಿದ್ದರು. ಘಟನೆಯಾದಗ ಸ್ಥಳ ಸುಮಾರು 70–100 ಜನರು ಸೇರಿದ್ದರು . ಆರೋಪಿಗೆ ಬುದ್ದಿವಾದ ಹೇಳುತ್ತಿದ್ದರು. ಆರೋಪಿಯನ್ನು ಘಟನಾ ಸ್ಥಳ ಮತ್ತು ಪೋಲೀಸ್ ಠಾಣೆಯಲ್ಲಿ ನೋಡಿರುತ್ತೇನೆ.

ಆರೋಪಿಯು ಘಟನಾ ದಿನದಂದು ಬಸ್ ನಿಲ್ದಾಣಕ್ಕೆ ಬಂದಿರಲಿಲ್ಲ, ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಆರೋಪಿಯು ಘಟನಾ ದಿನದಂದು ಬಸ್ ನಿಲ್ದಾಣಕ್ಕೆ ಬಂದಿಲ್ಲ ನಾನು ಗೀತಾ ರವರ ಮಾತುಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**Sd/-**

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಮಧುಗಿರಿ.